Rotary ರೋಟರಿ ಐಸಿರಿ ಪರ್ಕಳ
ವಲಯ-4, ರೋ. ಜಿಲ್ಲೆ-3182
ನಮ್ಮ ನಡೆ... ಕೃಷಿಯ ಕಡೆ...
UNITE FOR GOOD
ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ
# ಐಶ್ವರ್ಯ
ಸಂಪುಟ: 4 ಸಾಪ್ತಾಹಿಕ ಸಂಚಿಕೆ : 41
ದಿನಾಂಕ: 14.04.2026


Rtn. Francesco Arezzo
R.I. President


Rtn. K. Palaksha
District Governor


Rtn. Anil Kumar
President


Rtn. Krishnappa
Secretary

## ಒಂದು ಪರಿಚಯ

https://rotaryindia.org/

Rotary
Zones 4, 5, 6 & 7

ವಲಯ 4, 5, 6 ಮತ್ತು 7 ರಲ್ಲಿ ಭಾರತ, ಶ್ರೀಲಂಕಾ, ನೇಪಾಳ, ಮಾಲ್ಡೀವ್ಸ್ ಮತ್ತು ಭೂತಾನ್ ದೇಶಗಳಲ್ಲಿ ಸೇವೆ ಸಲ್ಲಿಸುತ್ತಿರುವ ರುವ ರೋಟರಿ ಕ್ಲಬ್‌ಗಳಿವೆ. ಇಲ್ಲಿ ಸೇವೆ, ವೈವಿಧ್ಯತೆ ಮತ್ತು ಸಮುದಾಯ ಮನೋಭಾವವು ನಮ್ಮ ಪ್ರದೇಶ ಮತ್ತು ಅದರಾಚೆಗೆ ಶಾಶ್ವತ ಪರಿಣಾಮ ಬೀರುತ್ತದೆ. ಹಲವಾರು ದಶಕಗಳ ಹಿಂದಿನ ಶ್ರೀಮಂತ ಇತಿಹಾಸದೊಂದಿಗೆ, ರೋಟರಿ ಈ ರಾಷ್ಟ್ರಗಳಲ್ಲಿ ಸಾಮಾಜಿಕ ರಚನೆಯ ಅವಿಭಾಜ್ಯ ಅಂಗವಾಗಿದೆ, ಏಕತೆ, ಸೇವೆ ಮತ್ತು ಮಾನವೀಯತೆಯ ಮೌಲ್ಯಗಳನ್ನು ಸಾಕಾರಗೊಳಿಸುತ್ತದೆ.

ಈ ವಲಯಗಳಲ್ಲಿನ ರೋಟರಿ ಕ್ಲಬ್‌ಗಳು ಚಟುವಟಿಕೆಯ ಕ್ರಿಯಾತ್ಮಕ ಕೇಂದ್ರ ಗಳಾಗಿವೆ, ವಿವಿಧ ಹಂತಗಳ ಉತ್ಸಾಹಭರಿತ ವ್ಯಕ್ತಿಗಳನ್ನು – ಉದ್ಯಮ ಕ್ಷೇತ್ರದ ನಾಯಕರು, ವೃತ್ತಿಪರರು, ಶಿಕ್ಷಕರು ಮತ್ತು ಸಮುದಾಯ ನಿರ್ಮಾತೃರು ಗಳನ್ನು ಒಂದುಗೂಡಿಸಿ, ಸಕಾರಾತ್ಮಕ ಬದಲಾವಣೆಯನ್ನು ಮಾಡುವ ಬದ್ಧತೆಯಿಂದ ಎಲ್ಲರೂ ಕಾರ್ಯನಿರ್ವಹಿಸುತ್ತಾರೆ.

ನಮ್ಮ ಕ್ಲಬ್‌ಗಳು ನಮ್ಮ ಪ್ರದೇಶದ ವೈವಿಧ್ಯಮಯ ಸಾಂಸ್ಕೃತಿಕತೆಯನ್ನು ಪ್ರತಿಬಿಂಬಿಸುವ ಸೂಕ್ಷ್ಮರೂಪಗಳಾಗಿವೆ. ಇದು ಸದಸ್ಯರಲ್ಲಿ ಸದ್ಭಾವನೆ ಮತ್ತು ಸೌಹಾರ್ದತೆಯನ್ನು ಬೆಳೆಸುತ್ತದೆ.

ಈ ದೇಶಗಳಾದ್ಯಂತ ಸಮುದಾಯಗಳು ಎದುರಿಸುತ್ತಿರುವ ವಿಶಿಷ್ಟ ಸವಾಲುಗಳನ್ನು ಪರಿಹರಿಸಲು ಸಮರ್ಪಿತವಾಗಿರುವ ರೋಟರಿ ಕ್ಲಬ್‌ಗಳು ಶಿಕ್ಷಣ, ಆರೋಗ್ಯ ರಕ್ಷಣೆ, ನೈರ್ಮಲ್ಯ ಮತ್ತು ಪರಿಸರ ಸುಸ್ಥಿರತೆಯಂತಹ ಕ್ಷೇತ್ರಗಳಲ್ಲಿನ ಯೋಜನೆಗಳಿಗೆ ಸಕ್ರಿಯವಾಗಿ ಕೊಡುಗೆ ನೀಡುತ್ತವೆ. ಪರಿಣಾಮಕಾರಿ ಉಪಕ್ರಮಗಳ ಮೂಲಕ, ಹಿಂದುಳಿದವ ರನ್ನು ಮೇಲಕ್ಕೆತ್ತಲು, ಯುವಕರನ್ನು ಸಬಲೀಕರಣಗೊಳಿಸಲು ಮತ್ತು ನಮ್ಮ ಸಮಾಜದ ವೈವಿಧ್ಯಮಯ ಅಗತ್ಯಗಳಿಗೆ ಅನುಗುಣವಾಗಿ ಸುಸ್ಥಿರ ಪರಿಹಾರಗಳನ್ನು ರಚಿಸಲು ಶ್ರಮಿಸುತ್ತವೆ.

ನಮ್ಮ ಪ್ರದೇಶಗಳಲ್ಲಿ ರೋಟರಿಯ ನೀತಿಯು 'ಸೇವಾ ಪರಮೋ ಧರ್ಮ' ಎಂಬ ಮನೋಭಾವದಲ್ಲಿ ಆಳವಾಗಿ ಬೇರೂರಿದೆ. ಸೇವೆಯು ಸದ್ಗುಣದ ಅತ್ಯುನ್ನತ ರೂಪವಾಗಿದೆ.

ಈ ರಾಷ್ಟ್ರಗಳಲ್ಲಿ ರೋಟರಿ ಕ್ಲಬ್‌ಗಳು ಕೈಗೊಂಡ ಹಲವಾರು ಸ್ಥಳೀಯ ಮತ್ತು ಅಂತರರಾಷ್ಟ್ರೀಯ ಯೋಜನೆಗಳಲ್ಲಿ ಸ್ವಯಂ ಸೇವೆಗಿಂತ ಹೆಚ್ಚಿನದಕ್ಕೆ ನಮ್ಮ ಬದ್ಧತೆಯು ಸ್ಪಷ್ಟವಾಗಿದೆ.

ರೋಟರಿ ಇಂಟರ್‌ನ್ಯಾಷನಲ್‌ನ ಭಾಗವಾಗಿ, ಈ ವಲಯಗಳಲ್ಲಿ 4,500 ಕ್ಕೂ ಹೆಚ್ಚು ಕ್ಲಬ್‌ಗಳಲ್ಲಿ ಹರಡಿರುವ ಸುಮಾರು 1,80,000 ರೋಟರಿ ಸದಸ್ಯರು ಸಕಾರಾತ್ಮಕ ಬದಲಾವಣೆಗೆ ಅಸಾಧಾರಣ ಶಕ್ತಿಯನ್ನು ರೂಪಿಸುತ್ತಾರೆ.

ಈ ಕ್ಲಬ್‌ಗಳು ಸಹಯೋಗ, ನೆಟ್‌ವರ್ಕಿಂಗ್ ಮತ್ತು ವಿಚಾರ ವಿನಿಮಯಕ್ಕೆ ವೇದಿಕೆಯನ್ನು ಒದಗಿಸುತ್ತವೆ. ನಗರ ಕೇಂದ್ರಗಳು, ಗ್ರಾಮೀಣ ಸಮುದಾಯಗಳು ಮತ್ತು ಅವುಗಳ ನಡುವೆ ಇರುವ ಎಲ್ಲವನ್ನೂ ವ್ಯಾಪಿಸಿರುವ ಕ್ಲಬ್‌ಗಳೊಂದಿಗೆ, ವ್ಯಕ್ತಿಗಳು ತಮ್ಮ ಉತ್ಸಾಹ ಮತ್ತು ಪರಿಣತಿಯೊಂದಿಗೆ ಹೊಂದಿಕೆಯಾಗುವ ಅರ್ಥಪೂರ್ಣ ಯೋಜನೆಗಳಿಗೆ ಸಂಪರ್ಕ ಸಾಧಿಸಲು, ತೊಡಗಿಸಿಕೊಳ್ಳಲು ಮತ್ತು ಕೊಡುಗೆ ನೀಡಲು ನಾವು ಒಂದು ಅನನ್ಯ ಅವಕಾಶವನ್ನು ನೀಡುತ್ತೇವೆ.

ಮುಂದಿನ ಪುಟಕ್ಕೆ

ಹಿಂದಿನ ಪುಟದಿಂದ

Rotary Zones 4, 5, 6 & 7

ಸೇವೆ ಮತ್ತು ಫೆಲೋಶಿಪ್‌ನ ಈ ಪ್ರಯಾಣದಲ್ಲಿ ನಮ್ಮೊಂದಿಗೆ ಸೇರಿ. ನೀವು ಅನುಭವಿ ವೃತ್ತಿಪರರಾಗಿರಲಿ, ಸಮುದಾಯ ನಾಯಕರಾಗಿರಲಿ ಅಥವಾ ಸಕಾರಾತ್ಮಕ ಪರಿಣಾಮ ಬೀರಲು ಉತ್ಸುಕರಾಗಿರುವ ಯಾರಾಗಿರಲಿ, ಎಲ್ಲರಿಗೂ ಉತ್ತಮ ಭವಿಷ್ಯವನ್ನು ರೂಪಿಸುವ ನಮ್ಮ ಪರಿವರ್ತನಾ ಉಪಕ್ರಮಗಳ ಭಾಗವಾಗಲು ವಲಯ 4, 5, 6 ಮತ್ತು 7 ರಲ್ಲಿರುವ ರೋಟರಿ ಕ್ಲಬ್‌ಗಳು ನಿಮ್ಮನ್ನು ಸ್ವಾಗತಿಸುತ್ತವೆ.

ವಲಯ 4, 5, 6 ಮತ್ತು 7 ರಲ್ಲಿರುವ ರೋಟರಿ ಕ್ಲಬ್‌ಗಳೊಂದಿಗೆ ಸೇವೆಯ ಸಂತೋಷ, ಸಮುದಾಯದ ಶಕ್ತಿ ಮತ್ತು ಸಕಾರಾತ್ಮಕ ಬದಲಾವಣೆಗೆ ಅಪರಿಮಿತ ಸಾಮರ್ಥ್ಯವನ್ನು ಅನ್ವೇಷಿಸಿ.

ಏಪ್ರಿಲ್ 2026ರ ರೋಟರಿ ಅಂತರಾಷ್ಟ್ರೀಯ ಮಾಸಿಕ ವಿಷಯವೆಂದರೆ **"ಪರಿಸರ ಮಾಸ" - Environmental Month.** ಈ ಮಾಸದಲ್ಲಿ ಪ್ರಪಂಚದಾದ್ಯಂತದ ರೋಟರಿ ಕ್ಲಬ್‌ಗಳು ಉದ್ಯಾನವನಗಳನ್ನು ಅಭಿವೃದ್ಧಿ ಪಡಿಸುವುದು, ನದಿ ಮತ್ತು ಜಲಮೂಲಗಳನ್ನು ರಕ್ಷಿಸುವುದು ಹಾಗೂ ತ್ಯಾಜ್ಯ ಮುಕ್ತ ಪರಿಸರ ನಿರ್ಮಾಣದಂತಹ ಚಟುವಟಿಕೆಗಳಲ್ಲಿ ತೊಡಗಿಕೊಂಡು, ಪ್ಲಾಸ್ಟಿಕ್ ಮುಕ್ತ ಅಭಿಯಾನ, ಪ್ಲಾಸ್ಟಿಕ್ ಮುಕ್ತ ಅಭಿಯಾನ, ಜಲಮೂಲಗಳಲ್ಲಿ ಪ್ಲಾಸ್ಟಿಕ್ ಸೇರುವುದನ್ನು ತಡೆಯಲು ಸ್ವಚ್ಛತಾ ಕಾರ್ಯಕ್ರಮ, ಕಾಂಪೋಸ್ಟ್ ತಂತ್ರಜ್ಞಾನ ಮಾಹಿತಿ, ಕೆರೆಗಳ ಪುನಶ್ಚೇತನ, ಮಳೆನೀರು ಕೊಯ್ಲು, ಇಕೋ–ಕ್ಲಬ್ ಸ್ಥಾಪನೆ, ಪರಿಸರ ಪೂರಕ ಕೃಷಿ ಬಗ್ಗೆ ಮಾರ್ಗದರ್ಶನ ನೀಡುತ್ತವೆ.

## ಪ್ರೇರಣಾ ಸಿರಿ

ಕ್ರಿಕೆಟ್ ಲೋಕದಲ್ಲಿ ಪ್ರತಿಭೆ, ತಾಳ್ಮೆ ಮತ್ತು ನಿರಂತರ ಹೋರಾಟದ ಸಂಕೇತವಾಗಿ ಗುರುತಿಸಿಕೊಂಡಿರುವ ಆಟಗಾರರಲ್ಲಿ ಒಬ್ಬರು Sanju Samson. ಅವರ ಜೀವನ ಪಯಣವು ಕೇವಲ ಯಶಸ್ಸಿನ ಕಥೆಯಲ್ಲ; ಅದರಲ್ಲಿ ಅನೇಕ ಏರಿಳಿತಗಳು, ಟೀಕೆಗಳು ಮತ್ತು ಮರುಏಳ್ಗೆಯ ಕ್ಷಣಗಳಿವೆ.

ಕೇರಳದ ತಿರುವನಂತಪುರಂನಲ್ಲಿ ಜನಿಸಿದ ಸಂಜು, ಬಾಲ್ಯದಿಂದಲೇ ಕ್ರಿಕೆಟ್ ಮೇಲಿನ ಅಪಾರ ಆಸಕ್ತಿಯನ್ನು ಹೊಂದಿದ್ದರು. ತಂದೆಯ ಪ್ರೋತ್ಸಾಹ ಮತ್ತು ಕಠಿಣ ಪರಿಶ್ರಮದಿಂದ ಅವರು ತಮ್ಮ ಪ್ರತಿಭೆಯನ್ನು ರೂಪಿಸಿಕೊಂಡರು. ಅಂಡರ್–19 ಮಟ್ಟದಲ್ಲಿ ಮೆರೆದ ಅವರು, ಶೀಘ್ರದಲ್ಲೇ ದೊಡ್ಡ ವೇದಿಕೆಗೆ ಕಾಲಿಟ್ಟರು.

Indian Premier League ನಲ್ಲಿ Rajasthan Royals ತಂಡದ ಪರವಾಗಿ ಆಡಿದ ಸಂಜು, ತನ್ನ ಆಕ್ರಮಣಕಾರಿ ಬ್ಯಾಟಿಂಗ್ ಮತ್ತು ಶೈಲಿಯಿಂದ ಅಭಿಮಾನಿಗಳನ್ನು ಆಕರ್ಷಿಸಿದರು.

ಆದರೆ, ಸ್ಥಿರತೆಯ ಕೊರತೆ ಅವರ ಪಯಣದಲ್ಲಿ ದೊಡ್ಡ ಅಡ್ಡಿಯಾಗಿ ಪರಿಣಮಿಸಿತು. ಕೆಲವು ಪಂದ್ಯಗಳಲ್ಲಿ ಅದ್ಭುತ ಪ್ರದರ್ಶನ ನೀಡಿದರೆ, ಇನ್ನೂ ಕೆಲವು ಪಂದ್ಯಗಳಲ್ಲಿ ವಿಫಲರಾದ ಕಾರಣ ಟೀಕೆಗಳು ಎದುರಾದವು.

> "ಕ್ಷಮತೆಯಲ್ಲಿ ಏರಿಳಿತ ಯಾವುದೇ ಕ್ಷೇತ್ರದಲ್ಲಾದರೂ ಸಾಮಾನ್ಯ. ಕ್ಷಮತೆಯಲ್ಲಿ ಕೊರತೆಯಾದರೆ ಐರಾಗ್ಯೆರಾಗಳಿಂದಲೂ ಕೇಳಿಸಿಕೊಳ್ಳಬೇಕಾಗುತ್ತದೆ. ತಮ್ಮ ಕ್ಷಮತೆಯ ಬಗ್ಗೆ ಮೌಲ್ಯಮಾಪನ ಮಾಡಿಕೊಳ್ಳದವರೂ ಇತರರ ಕ್ಷಮತೆಯ ಬಗ್ಗೆ ಟಿಪ್ಪಣಿ ಮಾಡುವ ಅಭ್ಯಾಸ ಹೊಂದಿರುತ್ತಾರೆ."

ಅಂತಾರಾಷ್ಟ್ರೀಯ ಮಟ್ಟದಲ್ಲಿ ಅವಕಾಶಗಳು ಸಿಕ್ಕಾಗಲೂ, ಅವುಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳಲಾಗದೆ ತಂಡದಿಂದ ಹೊರಗುಳಿಯುವ ಪರಿಸ್ಥಿತಿ ಎದುರಾಯಿತು.

ಆದರೆ ಸಂಜು ಹಿಂದೆ ಸರಿಯಲಿಲ್ಲ. ತನ್ನ ತಪ್ಪುಗಳನ್ನು ಅರಿತು, ಮತ್ತಷ್ಟು ಪರಿಶ್ರಮದಿಂದ ಮತ್ತೆ ಮೇಲೇಳಲು ಪ್ರಯತ್ನಿಸಿದರು.

Vijay Hazare Trophy ಸೇರಿದಂತೆ ದೇಶೀಯ ಟೂರ್ನಿಗಳಲ್ಲಿ ಉತ್ತಮ ಪ್ರದರ್ಶನ ನೀಡಿ, ಮತ್ತೆ India national cricket team ಗೆ ಮರಳುವ ಅವಕಾಶವನ್ನು ಗಳಿಸಿದರು. ಇತ್ತೀಚಿನ ಅವಧಿಯಲ್ಲಿ ಸಂಜು ಸ್ಯಾಮ್ಸನ್ ಅವರ ಆಟದಲ್ಲಿ ಕಂಡುಬಂದ ಪರಿಪಕ್ವತೆ ಮತ್ತು ಆತ್ಮವಿಶ್ವಾಸವು ಗಮನಾರ್ಹ ವಾಗಿದೆ. ಈ ಬೆಳವಣಿಗೆಯ ಹಿಂದೆ ಭಾರತೀಯ ಕ್ರಿಕೆಟ್ ದಿಗ್ಗಜ Sachin Tendulkar ಅವರ ಪ್ರೇರಣೆ ಮತ್ತು ಮಾರ್ಗದರ್ಶನವೂ ಒಂದು ಪ್ರಮುಖ ಕಾರಣವಾಗಿದೆ ಎಂದು ಹಲವರು ಅಭಿಪ್ರಾಯಪಡುತ್ತಾರೆ. ಸಚಿನ್ ಅವರ ಅನುಭವ, ಶಿಸ್ತು ಮತ್ತು ಆಟದ ಮೇಲಿನ ನಿಷ್ಠೆ, ಯುವ ಆಟಗಾರರಿಗೆ ಸದಾ ದಾರಿದೀಪವಾಗಿದ್ದು, ಸಂಜು ಕೂಡ ಆ ಪ್ರೇರಣೆಯನ್ನು ತಮ್ಮ ಆಟದಲ್ಲಿ ಅಳವಡಿಸಿಕೊಂಡಿದ್ದಾರೆ.

ಇದರ ಪರಿಣಾಮವಾಗಿ, ಸಂಜು ಅವರ ಆಟದಲ್ಲಿ ಈಗ ಹೆಚ್ಚು ಸಮತೋಲನ, ಜವಾಬ್ದಾರಿ ಮತ್ತು ಸ್ಥಿರತೆ ಕಾಣಿಸಿಕೊಳ್ಳುತ್ತಿದೆ. ಅವರು ಕೇವಲ ಪ್ರತಿಭಾವಂತ ಆಟಗಾರನಷ್ಟೇ ಅಲ್ಲ, ತಂಡವನ್ನು ಮುನ್ನಡೆಸುವ ನಾಯಕನಾಗಿಯೂ ರೂಪುಗೊಳ್ಳುತ್ತಿದ್ದಾರೆ.

ಸಂಜು ಸ್ಯಾಮ್ಸನ್ ಅವರ ಜೀವನ ಪಯಣವು ನಮಗೆ ಹೇಳುವುದೇನಂದರೆ:

ಯಶಸ್ಸು ಒಂದು ದಿನದಲ್ಲಿ ಸಿಗುವುದಿಲ್ಲ; ಅದು ನಿರಂತರ ಪ್ರಯತ್ನ, ಆತ್ಮವಿಶ್ವಾಸ ಮತ್ತು ಸರಿಯಾದ ಮಾರ್ಗದರ್ಶನದ ಫಲ.

ಅವರ ಕಥೆ, ಪ್ರತಿಯೊಬ್ಬ ಯುವಕರಿಗೂ — ವಿಶೇಷವಾಗಿ ಕ್ರೀಡೆಯಲ್ಲಿ ಸಾಧನೆ ಮಾಡಲು ಬಯಸುವವರಿಗೆ – ಒಂದು ದೊಡ್ಡ ಪ್ರೇರಣೆಯಾಗಿದೆ.

**ಬೌದ್ಧಿಕ ಸಿರಿ** *ವೈವಿಧ್ಯಮಯ ದೃಷ್ಟಿಕೋನ !*

'Perspective' ಎನ್ನುವುದನ್ನು ಕನ್ನಡದಲ್ಲಿ 'ದೃಷ್ಟಿಕೋನ' ಎಂದು ಕರೆಯಲಾಗುತ್ತದೆ. ಇದು ನಮ್ಮ ಬದುಕನ್ನು ರೂಪಿಸುವ ಕನ್ನಡಿ – ಒಬ್ಬ ವ್ಯಕ್ತಿಯು ಒಂದು ವಿಷಯವನ್ನು ನೋಡುವ, ಅರ್ಥಮಾಡಿಕೊಳ್ಳುವ ಅಥವಾ ವಿಶ್ಲೇಷಿಸುವ ರೀತಿಯನ್ನು ಸೂಚಿಸುತ್ತದೆ.

ಜೀವನದಲ್ಲಿ ನಾವು ಎದುರಿಸುವ ಘಟನೆಗಳಿಗಿಂತ, ಆ ಘಟನೆಗಳನ್ನು ನಾವು ಯಾವ ರೀತಿ ನೋಡುತ್ತೇವೆ ಎಂಬುದು ಬಹಳ ಮುಖ್ಯ. ಇದನ್ನೇ ನಾವು 'ದೃಷ್ಟಿಕೋನ' ಎನ್ನುತ್ತೇವೆ. ಒಬ್ಬನಿಗೆ ಅರ್ಧ ಲೋಟ ನೀರು 'ಅರ್ಧ ಖಾಲಿ' ಎಂದು ಕಂಡರೆ, ಇನ್ನೊಬ್ಬನಿಗೆ ಅದು 'ಅರ್ಧ ತುಂಬಿದೆ' ಎಂದು ಕಾಣಬಹುದು.

ಇಲ್ಲಿ ಲೋಟದಲ್ಲಿರುವ ನೀರಿನ ಪ್ರಮಾಣ ಬದಲಾಗುವುದಿಲ್ಲ, ಬದಲಿಗೆ ಅದನ್ನು ನೋಡುವವರ ದೃಷ್ಟಿಕೋನ ಬದಲಾಗಿರುತ್ತದೆ.

ನಮ್ಮ ದೃಷ್ಟಿಕೋನವು ನಾವು ತೆಗೆದುಕೊಳ್ಳುವ ನಿರ್ಧಾರಗಳ ಮೇಲೆ ನೇರ ಪರಿಣಾಮ ಬೀರುತ್ತದೆ.

ಇತರರ ದೃಷ್ಟಿಕೋನದಿಂದ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದಾಗ (Empathy), ಪರಸ್ಪರ ಅರಿವು ಮತ್ತು ಗೌರವ ಹೆಚ್ಚುತ್ತದೆ.

ಒಂದು ಸಮಸ್ಯೆಯನ್ನು ಬೇರೆ ಬೇರೆ ಆಯಾಮಗಳಿಂದ (Multiple perspectives) ನೋಡಿದಾಗ, ಸುಲಭವಾದ ಪರಿಹಾರಗಳು ಗೋಚರಿಸುತ್ತವೆ.

ನಮ್ಮ ದೃಷ್ಟಿಕೋನ ನಮ್ಮ ಅನುಭವ, ಸಂಸ್ಕೃತಿ ಮತ್ತು ಮೌಲ್ಯಗಳ ಆಧಾರದ ಮೇಲೆ ರೂಪಿತವಾಗಿರುತ್ತದೆ.

ನಮ್ಮ ದೃಷ್ಟಿಕೋನವು ವಿಶಾಲವಾಗಿದ್ದಷ್ಟೂ ನಮ್ಮ ಜ್ಞಾನ ಮತ್ತು ಬದುಕು ಸಮೃದ್ಧವಾಗುತ್ತದೆ. ಸಂಕುಚಿತ ದೃಷ್ಟಿಕೋನವು ನಮ್ಮನ್ನು ಮಿತಿಯೊಳಗೆ ಬಂಧಿಸಿದರೆ, ಮುಕ್ತ ದೃಷ್ಟಿಕೋನವು ಜಗತ್ತನ್ನು ಹೊಸ ರೀತಿಯಲ್ಲಿ ಕಾಣಲು ಪ್ರೇರೇಪಿಸುತ್ತದೆ.

**ಸಂಕಲನ : ರೊ. ರಾಜೇಶ್ ಡಿ. ಶೆಟ್ಟಿ**

## ಏಪ್ರಿಲ್ 7ರ ಸಭೆಯ ಛಾಯಾಚಿತ್ರಗಳು

















**ಪ್ರವಾಸ ಸಿರಿ** ದಿನಾಂಕ:19.04.2026 ಭಾನುವಾರ "Relax Leisure", ಉಪ್ಪಿನಕೋಟೆ – ಇಲ್ಲಿಗೆ ಒಂದು ದಿನದ ಪ್ರವಾಸ ಆಯೋಜಿಸಲಾಗಿದೆ. ಈ "ಪ್ರವಾಸ ಸಿರಿ"ಯಲ್ಲಿ ಪಾಲ್ಗೊಳ್ಳುವ ತಮ್ಮ ಆಯ್ಕೆಯನ್ನು ನಮೂದಿಸಲು ಅನುಕೂಲವಾಗುವಂತೆ, ಲಿಂಕ್ ಒಂದನ್ನು ನಮ್ಮ ಸಂಘಸೇವಾ ನಿರ್ದೇಶಕರಾದ ರೊ. ಸುನಿಲ್ ಕುಮಾರ್ ಅವರು, ರೋಟರಿ ಐಸಿರಿ ಅಧಿಕೃತ ವಾಟ್ಸಾಪ್ ಗ್ರೂಪ್ನಲ್ಲಿ ಏಪ್ರಿಲ್ ಎರಡನೇ ತಾರೀಕಿನದಂದು ಹಂಚಿಕೊಂಡಿರುತ್ತಾರೆ.

ಸದಸ್ಯರೆಲ್ಲರೂ ತಮ್ಮ ಭಾಗವಹಿಸುವಿಕೆಯನ್ನು ಆದಷ್ಟು ಬೇಗ ಖಾತ್ರಿ ಮಾಡಬೇಕೆಂದು ರೊ. ಸ್ಮಿತಾ ಜಿ. ಕಾಮತ್ ಅವರೂ ವಿನಂತಿಸಿರುತ್ತಾರೆ.



7/4/2026 ರಂದು ಜೀವನ ಸಿರಿ ಕಾರ್ಯಕ್ರಮವನ್ನು ನಡೆಸಿಕೊಟ್ಟ ರೊ. ಸ್ಮಿತಾ ಜಿ. ಕಾಮತ್ ಅವರನ್ನು ಶಾಲು ಹೊದೆಸಿ ಗೌರವಿಸಲಾಯಿತು.

## ಕಾರ್ಯದರ್ಶಿಯವರ ವರದಿ



ರೋಟರಿ ಐಸಿರಿಯ 38ನೇ ವಾರದ ಸಭೆ ತಾರೀಖು 7/4/2026ರಂದು RCC ಕಾರ್ಯಾಲಯದಲ್ಲಿ ನಡೆಯಿತು. ದಂಡಪಾಣಿ ರೊ. ಕೊರಗಪ್ಪ ಶೆಟ್ಟಿಗಾರ್ ಅವರು ಕೊರಳ ಲಾಂಛನ ತೊಡಿಸಿ ಅಧ್ಯಕ್ಷರು ಸಭೆಯನ್ನು ಆರಂಭಿಸಿದರು. ರೊ. ಎ. ಗಣೇಶ್ ಅವರು ಪ್ರಾರ್ಥನೆ ನಡೆಸಿದರು. ಅಧ್ಯಕ್ಷರಾದ ರೊ. ಅನಿಲ್ ಕುಮಾರ್ ಅವರು ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯದರ್ಶಿ ರೊ. ಕೃಷ್ಣಪ್ಪ ಅವರು ಕಳೆದ ವಾರದ ವರದಿಯನ್ನು ಮಂಡಿಸಿದರು.

ಜೀವನಸಿರಿ ಕಾರ್ಯಕ್ರಮದಲ್ಲಿ ರೊ. ಸ್ಮಿತಾ ಜಿ. ಕಾಮತ್ ಅವರು ತಮ್ಮ ಜೀವನದ ಅನುಭವಗಳನ್ನು ಹಂಚಿಕೊಂಡರು. ವಾರದ ಬುಲೆಟಿನ್ ಐಶ್ವರ್ಯವನ್ನು ರೊ. ಸ್ಮಿತಾ ಜಿ. ಕಾಮತ್ ಅವರು ಬಿಡುಗಡೆ ಮಾಡಿದರು. ಸಂಪಾದಕರಾದ ರೊ. ರಾಜೇಶ್ ಡಿ. ಶೆಣೈ ಅವರು ಸಹಕರಿಸಿದರು.

ಸದಸ್ಯರ ಅವಕಾಶದಲ್ಲಿ ರೊ. ಕೃಷ್ಣಪ್ಪ ಅವರು ರೊ. ಸ್ಮಿತಾ ಜಿ. ಕಾಮತ್ ಅವರ ಮಾತುಗಾರಿಕೆಯನ್ನು ಪ್ರಶಂಸಿಸಿ ರೋಟರಿ ಐಸಿರಿಗೆ ಇನ್ನಷ್ಟು ಮಹಿಳಾ ಸದಸ್ಯರನ್ನು ಸೇರಿಸಲು ಸಹಕರಿಸಿ ಎಂದು ಕೇಳಿಕೊಂಡರು. ರೊ. ರಾಜೇಶ್ ಡಿ. ಶೆಣೈ ಅವರು ರೊ. ಸ್ಮಿತಾ ಜಿ ಕಾಮತ್ ಅವರ ಜೀವನದ ಅನುಭವ ವಿಭಿನ್ನವಾಗಿತ್ತು ಎಂದರು. ತಮ್ಮ PELS and SELS ನ ಅನುಭವವನ್ನು ಸವಿಸ್ತಾರವಾಗಿ ಹಂಚಿಕೊಂಡರು. ರೊ. ಎ. ಗಣೇಶ್ ಅವರು ರೊ. ಸ್ಮಿತಾ ಕಾಮತ್ ಅವರ ಹೋರಾಟದ ಬದುಕನ್ನು ಪ್ರಶಂಸಿಸಿದರು. ಮುಂದಿನ ಸಾಲಿನ ಅಧ್ಯಕ್ಷ ಕಾರ್ಯದರ್ಶಿಯವರಿಗೆ ಶುಭಹಾರೈಸಿದರು. ರೊ. ಅನಿಲ್ ಕುಮಾರ್ ಅವರ ಮುಂದಾಳುತ್ವದಲ್ಲಿ ನಿರ್ಮಾಣವಾದ ನಾರಾಯಣ ಗುರು ಆಡಿಟೋರಿಯಂನ ಯಶಸ್ಸಿಗಾಗಿ ಅವರನ್ನು ಪ್ರಶಂಸಿಸಿದರು.

ರೊ. ಸುದರ್ಶನ ಪೈ ಅವರು ರೊ. ಸ್ಮಿತಾ ಕಾಮತ್ ಅವರ ಜೀವನದ ಅನುಭವಗಳನ್ನು ವಿವರಿಸಿದ ರೀತಿಯನ್ನು ಮೆಚ್ಚಿ ಅಭಿನಂದಿಸಿದರು. ರೊ. Dr ಪ್ರಭಾಕರ್ ಯು. ರೆಂಜಾಳ ಅವರು ಸಂಭವದಿಂದ ಸಹಕರಿಸುವ ಜೀವನ ಸಂಗಾತಿ ಇದ್ದರೆ ಸಾಧನೆ ಸಾಧ್ಯ ಎನ್ನುತ್ತಾ ರೊ. ಸ್ಮಿತಾ ಕಾಮತ್ ಹಾಗೂ ಗುರುಪ್ರಸಾದ್ ಕಾಮತ್ ಅವರಿಗೆ ಶುಭ ಹಾರೈಸಿದರು.

ನಿಯೋಜಿತ ಅಧ್ಯಕ್ಷರಾದ ರೊ. ಸಂದೀಪ್ ಕುಮಾರ್ ಅವರು ರೊ. ಸ್ಮಿತಾ ಕಾಮತ್ ಅವರು ಜೀವನದಲ್ಲಿ ತೋರಿದ ಧೈರ್ಯವನ್ನು ಪ್ರಶಂಸಿಸಿದರು. PELS and SELS ನ ವಿಶಿಷ್ಟ ಅನುಭವಗಳನ್ನು ಹಂಚಿಕೊಂಡರು.

ಅಧ್ಯಕ್ಷೀಯ ಭಾಷಣದಲ್ಲಿ ರೊ. ಅನಿಲ್ ಕುಮಾರ್ ಅವರು ಅಡೆತಡೆಗಳಿಂದ ಸೋತವರೇ ಮುಂದೆ ಎದ್ದು ನಿಂತು ಗೆಲ್ಲುವರು ಎಂಬ ಸಂದೇಶ ನೀಡಿದರು. ತನ್ನ ಅನುಪಸ್ಥಿತಿಯಲ್ಲಿ club ನ ಕಾರ್ಯಕ್ರಮಗಳನ್ನು ನಿರಂತರ ನಡೆಸಿದ್ದಕ್ಕೆ ಎಲ್ಲರಿಗೂ ಧನ್ಯವಾದ ಸಮರ್ಪಿಸಿದರು. ಮುಂದಿನ ದಿನಗಳಲ್ಲಿ ನಡೆಯಬೇಕಿರುವ club ನ ಕಾರ್ಯಕ್ರಮಗಳ ಬಗ್ಗೆ ಬೋರ್ಡ್ ಮೀಟಿಂಗ್ ನಲ್ಲಿ ನಿರ್ಧರಿಸುವುದಾಗಿ ತಿಳಿಸಿದರು.

ಅದೃಷ್ಟಶಾಲಿ ವ್ಯಕ್ತಿಯ ಆಯ್ಕೆಯನ್ನು ಅನ್ನೆಟ್ ಯಶ ನಡೆಸಿದರು. ರೊ. ಪ್ರಭಾಕರ್ ಶೆಟ್ಟಿ ಅವರು ಅದೃಷ್ಟಶಾಲಿ ವ್ಯಕ್ತಿಯಾಗಿ ಆಯ್ಕೆಯಾದರು. ರೊ. ಸ್ಮಿತಾ ಕಾಮತ್ ಅವರನ್ನು ರೊ. ಗುರುಪ್ರಸಾದ್ ಕಾಮತ್ ಅವರು ಶಾಲು ಹಾಕಿ ಗುರುತಿಸಿದರು. ಕಾರ್ಯದರ್ಶಿ ರೊ. ಕೃಷ್ಣಪ್ಪ ಅವರು ಧನ್ಯವಾದ ಸಮರ್ಪಿಸಿದರು

ದಂಡಪಾಣಿ ಕೊರಳ ಲಾಂಛನ ತೆಗೆದು ಅಧ್ಯಕ್ಷರು ಸಭೆಯನ್ನು ಮುಂದೂಡಿದರು.

ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

## "ಐಶ್ವರ್ಯ" 40ನೇ ಸಂಚಿಕೆ ಬಿಡುಗಡೆ



ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ ಸಾಪ್ತಾಹಿಕ "ಐಶ್ವರ್ಯ"ದ ನಲ್ವತ್ತನೇ ಇ–ಸಂಚಿಕೆಯನ್ನು, ರೊ. ರೊ. ಸ್ಮಿತಾ ಜಿ. ಕಾಮತ್ ರವರು 07/04/26ರ ವಾರದ ಸಭೆಯಲ್ಲಿ ಬಿಡುಗಡೆಗೊಳಿಸಿದರು.



ರೋಟರಿ ಐಸಿರಿಯ 38ನೇ ವಾರದ ಸಭೆಯಲ್ಲಿ ಅದೃಷ್ಟಶಾಲಿ ರೊಟೇರಿಯನ್ ಆಯ್ಕೆಯನ್ನು ಅನ್ನೆಟ್ ಯಶಾ ಕಾಮತ್ ನಡೆಸಿ, ರೊ. ಪ್ರಭಾಕರ್ ಶೆಟ್ಟಿ ಅದೃಷ್ಟಶಾಲಿಯಾಗಿ ಆಯ್ಕೆಯಾದರು.